<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>

ಶ್ರೀರಂಗಪಟ್ಟಣ.

ಸಿ.ಸಿ.ಃ 249/2016

ಪಿ. ಡಬ್ಲ್ಯು: 06

ಸಿ. ಡಬ್ಲ್ಯು: 07

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀಕಾಂತ |
| ತಂದೆ/ಪತಿಯ ಹೆಸರು | ಃ | ಚಂದ್ರಚಾರಿ |
| ವಯಸ್ಸು | ಃ | 29 ವರ್ಷ |
| ವೃತ್ತಿ | ಃ | ಮರ ಕೆಲಸ |
| ವಾಸ | ಃ | ಇಲವಾಲ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 14.03.2023

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಸಾಕ್ಷಿಗೆ ನಿಪಿ.3 ದಾಖಲೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದನ್ನು ಒಪ್ಪಿದ್ದು ಸಾಕ್ಷಿಯ ಸಹಿಯನ್ನು ನಿಪಿ.3-ಸಿ ಎಂದು ಗುರುತಿಸಲಾಯಿತು.

ನಿಪಿ.3 ಕ್ಕೆ ನಾನು ವೃತ್ತ ನಿರೀಕ್ಷಕರ ಕಛೇರಿ, ಶ್ರೀರಂಗಪಟ್ಟಣದಲ್ಲಿ ಸಹಿ ಮಾಡಿರುತ್ತೇನೆ. ನಿಪಿ.3 ಕ್ಕೆ ಯಾವ ಕಾರಣದಿಂದ ಸಹಿ ಮಾಡಿದ್ದೇನೆಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ನನ್ನ ಸಂಗಡ ನಿಪಿ.3 ಕ್ಕೆ ಶಿವಕುಮಾರ ಎನ್ನುವವರು ಸಹ ಸಹಿ ಮಾಡಿರುತ್ತಾರೆ. ಸಾಕ್ಷಿಗೆ ನಿಪಿ.7 ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾನು ಇರುವುದನ್ನು ಒಪ್ಪಿರುತ್ತಾರೆ. ನಿಪಿ.7 ಅನ್ನು ಯಾವ ಕಾರಣಕ್ಕೆ ಪೋಲೀಸರು ತೆಗೆದಿದ್ದಾರೆಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>

ದಿಃ 13.09.2015 ರಂದು ಬೆಳಿಗ್ಗೆ 11.00-11.30 ಸಮಯದಲ್ಲಿ ಶ್ರೀರಂಗಪಟ್ಟಣ ಸರ್ಕಲ್ ಇನ್ಸಪೆಕ್ಟರ್ ರವರ ಕಛೇರಿಯಲ್ಲಿ ನನ್ನ ಮತ್ತು ಶಿವಕುಮಾರ ರವರ ಸಮಕ್ಷಮ ಪೋಲೀಸರು ಪಿರ್ಯಾದಿ ಹಾಜರುಪಡಿಸಿದ ಫೋಟೋಗಳನ್ನು ತಮ್ಮ ವಶಕ್ಕೆ ಪಡೆದರು ಆಗ

ನಾನು ನಿಪಿ.3 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.3 ಜರುಗಿಸುವ ಕಾಲಕ್ಕೆ ನಿಪಿ.7 ಭಾವಚಿತ್ರವನ್ನು ಪೋಲೀಸರು ತೆಗೆದಿದ್ದರು ಎಂದರೆ ಸರಿಯಲ್ಲ.

ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ.3 ರ ಸಂಬಂಧ ನಾನು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.